ಅಧ್ಯಕ್ಷರು.— ಪ್ರಸ್ತಾವ ಏನೆಂದರೆ, ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸಂವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ೧೯೮೫ರ ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರಂತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ, ''೧೯೮೫ರ ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

THE UNIVERSITY OF AGRICULTURAL SCIENCES (AMENDMENT) BILL 1985.

Motion to Consider

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ಇಲಾಖೆ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ೧೯೮೫ನೇ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸ್ (ಅಮೆಂಡ್‌ಮೆಂಟ್) ವಿಧೇಯಕವನ್ನು ಸಭೆಯ ಒಪ್ಪಿಗೆಗಾಗಿ ಮಂಡಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಎಂ. ಪಿ. ಪ್ರಕಾಶ್.— ಮಾನ್ಯ ಅಧ್ಯಕ್ಷರೇ, ಹಿಂದೆ ಬೇರೆ ಬೇರೆ ಅಧಿಕಾರಿ ವಲಯದಲ್ಲಿ ತಕ್ಕಂಥವರು, ವಿಶ್ವವಿದ್ಯಾನಿಲಯದ ಕಾನೂನಿಗೆ ವಿರುದ್ಧವಾಗಿ ಯಾವುದಾದರೂ ಕಾಲೇಜುಗಳನ್ನು ಸ್ಥಾಪನೆ ಮಾಡಬೇಕೆಂದು ಬಂದಾಗ, ಕಾನೂನಿನ ಚೌಕಟ್ಟಿನಲ್ಲಿ ಕಾಲೇಜುಗಳನ್ನು ಸ್ಥಾಪನೆ ಮಾಡುವ ಉದ್ದೇಶಕ್ಕಾಗಿ ''To Establish and to maintain'' ಎರಡನೇ ಕಲಂನಲ್ಲಿರುವ ಅಂಶವನ್ನು ಸೇರಿಸಿಕೊಂಡಂಥಾದ್ದುದು. ಕರ್ನಾಟಕ ರಾಜ್ಯದ ಭೌಗೋಳಿಕ ವ್ಯಾಪ್ತಿಯನ್ನು ಬಿಟ್ಟು ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ಪರವಾನಗಿಯನ್ನು ತೆಗೆದುಕೊಂಡು ಬಂದು ಕರ್ನಾಟಕ ರಾಜ್ಯದಲ್ಲಿ ಸ್ಥಾಪಿಸುವ ಕಾಲೇಜುಗಳಿಗೆ ಮಾನ್ಯತೆ ಕೊಡುವುದರ ಬಗ್ಗೆ ತಿದ್ದುಪಡಿಯನ್ನು ತರಲಾಗಿದೆ. ಇದನ್ನು ಸದಸ್ಯರು ದಯವಿಟ್ಟು ಒಪ್ಪಬೇಕು. ಮತ್ತು ಹಿಂದೆ ಸುಗ್ರೀವಾಜ್ಞೆ ಹೊರಡಿಸಿದ್ದಕ್ಕೆ ಈ ವಿಧೇಯಕವನ್ನು ಸದನದಲ್ಲಿ ತಂದಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ಈ ಮಸೂದೆಯನ್ನು ನಾನು ಸ್ವಾಗತ ಮಾಡುತ್ತೇನೆ. ಕಾರಣ ಏನೆಂದರೆ, Ordiance Number 13 of 1985 replacing bill, ಸ್ವಾಗತ ಮಾಡುವುದಕ್ಕೆ ಕಾರಣಗಳೂ ಇವೆ. ಪದೇ ಪದೇ ಪ್ರೈವೇಟ್ ಮೆಡಿಕಲ್ ಕಾಲೇಜು, ಟೆಕ್ನಿಕಲ್ ಕಾಲೇಜುಗಳು ಮತ್ತು ಇಂಜಿನಿಯರಿಂಗ್ ಕಾಲೇಜುಗಳ ವಿಚಾರ ಬಂದಾಗಲೂ ಕೂಡ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಸರ್ಕಾರ ತಂದಿರತಕ್ಕ ಮಸೂದೆಯನ್ನು ಏತಕ್ಕೆ ಸ್ವಾಗತ ಮಾಡುತ್ತೇನೆಂದರೆ, ಈಗಾಗಲೇ ನಾನು ಹೇಳಿದಹಾಗೆ, ವೈದ್ಯಕೀಯ, ಇಂಜಿನಿಯರಿಂಗ್ ಕಾಲೇಜುಗಳ ಪರಿಸ್ಥಿತಿಯನ್ನು ನೋಡಿದರೆ, ಇವುಗಳಿಗೂ ಮತ್ತೊಂದು ರೋಗ ಕರ್ನಾಟಕ ರಾಜ್ಯದಲ್ಲಿ ಬೆಳೆದೀತು ಏನೋ ಎಂಬ ಹೆದರಿಕೆ, ಭಯ ಬಂದಿದೆ. ಈಗಾಗಲೇ ನಮ್ಮ ಮೆಡಿಕಲ್ ಕಾಲೇಜುಗಳು ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ''In the name of capitation fees ಎಲ್ಲಾ ಅವ್ಯವ

ಹಾರಗಳು ನಡೆಯುತ್ತಿದೆ. ಇದು ನರ್ಸರಿಯಿಂದ ಪ್ರಾರಂಭವಾಗಿ, ಸ್ನಾತಕೋತ್ತರ ಶಿಕ್ಷಣ, ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಇವುಗಳಿಗೂ ಕೂಡ ತಗಲಿಕೊಂಡಿದೆ. ಇನ್ನು ಕೂಡ ಬಿಡುಗಡೆ ಮಾಡುವುದಕ್ಕಾಗಿಲ್ಲ. ನಾನೂ ಕೂಡ ಅಗ್ರಿಕಲ್ಚರಲ್ ಮಿನಿಸ್ಟರ್ ಆಗಿದ್ದಾಗ ನೋಡಿದ್ದೇನೆ. ಬಿ.ಎಸ್‌ಸಿ (ಎಜಿ), ಬಿ. ವಿ. ಎಸ್. ಸಿ, ಬಿ ಎಫ್. ಎಸ್‌ಸಿ (ಫಿಶರೀಸ್) ಇವುಗಳಿಗೂ ಕೂಡ ತುಂಬಾಬೇಡಿಕೆ ಬರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಅನೇಕ ಜನರನ್ನು ಹೊರದೇಶಗಳಿಗೆ ಕಳಿಸಿಸಿ ತರಬೇತಿ ಪಡೆದುಕೊಂಡು ಬರತಕ್ಕಂಥಾದ್ದನ್ನು ನೋಡಿದ್ದೇವೆ. ಇತ್ತೀಚೆಗೆ ಕನಕಪುರಕ್ಕೆ ಹೋಗುವ ದಾರಿಯಲ್ಲಿ ರಾಷ್ಟ್ರೀಯ ವೆಟರ್ನರಿ ಕಾಲೇಜ್ ಯಾರೋ ಒಬ್ಬರು ಸ್ಥಾಪನೆ ಮಾಡುವ ವಿಚಾರವನ್ನು ಕೇಳಿದ್ದೇನೆ. ಇವತ್ತು ಧಾರವಾಡ, ಬೆಂಗಳೂರು ಕೃಷಿ ಇದರ ಬಗ್ಗೆ ಬುಕ್‌ಲೆಟ್ ಮಾಡಿ ಹಂಚಿದ್ದಾರೆ. ಕಾಲೇಜುಗಳಲ್ಲಿ ಸಿಕ್ಕಾಪಟ್ಟೆ ಡಿಮ್ಯಾಂಡ್ ಇದೆ. ಬಿ.ಎಸ್‌ಸಿ (ಎಜಿ) ತಂಬಾ ಒಳ್ಳೆಯದು, ಅವರೂ ಕೂಡ ಸರ್ಕಾರಕ್ಕೆ ಇರತಕ್ಕ ಬೇಡಿಕೆಯನ್ನು ಹೇಳಿದ್ದಾರೆ. ನಾನು ವಿರೋಧಪಕ್ಷದಲ್ಲಾದ್ದಾಗಲೂ ಇದರ ಬಗ್ಗೆ ಹೇಳಿದ್ದೆ. ಪ್ರೈವೇಟ್ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್, ಕಾಲೇಜುಗಳನ್ನು ಪ್ರಾರಂಭ ಮಾಡಿದಾಗಲೇ ನಾನು ವಿರೋಧ ಮಾಡಿದ್ದೇನೆ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಹಣಪಂತರ ಮಕ್ಕಳು ಇಂಜಿನಿಯರುಗಳಾಗುತ್ತಾರೆ. ಡಾಕ್ಟರುಗಳಾಗಿರುತ್ತಾರೆ. ಇವೊತ್ತು ಅಗ್ರಿ ಕಲ್ಚರಲ್ ಸೈನ್ಸ್, ವೆಟರ್ನರಿ ಸೈನ್ಸ್ ಬಹಳ ವೇಗವಾಗಿ ಬೆಳೆಯತಕ್ಕ ಕ್ಷೇತ್ರಗಳಾಗಿವೆ. ಕೃಷಿ ಪ್ರಧಾನ ವಾದ ನಮ್ಮ ಸಮಾಜದಲ್ಲಿ ೭೫–೭೬ ಪರ್ಸೆಂಟ್ ಜನರು ವ್ಯವಸಾಯದಿಂದ ಜೀವನ ಮಾಡತಕ್ಕವರಿದ್ದಾರೆ. ವ್ಯವಸಾಯಗಾರನಿಗೆ ಭೂಮಿ ಎಷ್ಟು ಮುಖ್ಯವೋ ಅಷ್ಟೇ ಇದೂ ಕೂಡ ಮುಖ್ಯವಾಗಿರುತ್ತದೆ.

ಬರೀ ಅಷ್ಟೇ ಅಲ್ಲ, ಬೇರೆ ಬೇರೆ ಪ್ರಾಣಿಗಳ ಸಂತತಿ ಯಾವರೀತಿಯಾಗಿದೆ ಎಂದರೆ ಅದು ಹಂದಿಯೇ ಇರಬಹುದು ಮತ್ತೊಂದೇ ಇರಬಹುದು, ಉದಾಹರಣೆಗೆ ಹಂದಿ ವಿಚಾರ ತೆಗೆದುಕೊಳ್ಳೋಣ. ಡೆನ್ಮಾರ್ಕ್‌ನಲ್ಲಿ ಈ ಹಂದಿಗೆ ಬಹಳ ಬೆಲೆ ಇದೆ. ಹಂದಿಯ ಸ್ಪೆಷಲ್ ತಳಿಗಳು ಏನು ಇವೆ ಅವಕ್ಕೆ ಬಹಳ ಬೆಲೆ ಜಾಸ್ತಿ ಇದೆ. ಅದರ ಮಾಂಸ ಬಹಳ ರುಚಿಯೂ ಇದೆ. ಮಾನ್ಯ ಅಧ್ಯಕ್ಷರಿಗೆ ಅದರ ರುಚಿ ಹೇಗಿದೆ ಎನ್ನುವುದು ಗೊತ್ತಿರಬೇಕು.

ಅಧ್ಯಕ್ಷರು.—ನಿಮಗೆ ಗೊತ್ತಾದರೆ ಸಾಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಆ ಹಂದಿಗೆ ಬರೀ ಹಾಲು ಮತ್ತು ಬ್ರೆಡ್ ಮಾತ್ರ ತಿನ್ನಿಸುತ್ತಾರೆ. ಇನ್ನೇನೂ ಇಲ್ಲ. ಡಿಪಾರ್ಟ್‌ಮೆಂಟಿನವರು ಅದನ್ನು ಚೆನ್ನಾಗಿ ಬೆಳೆಸುತ್ತಾರೆ. ಅದರ ಮಾಂಸ ಎನು ಇದೆ ಅದು ಬಹಳ ಸರ್ವ ಶ್ರೇಷ್ಠವಾದುದು. ಆದರಿಂದ ಅದಕ್ಕೆ ಬಹಳ ಬೆಲೆ ಸಿಕ್ಕುತ್ತದೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್.—ನಮ್ಮ ದೇಶದಲ್ಲಿ ಮಕ್ಕಳಿಗೇ ಹಾಲು ಬ್ರೆಡ್ ಸಿಕ್ಕುವುದಿಲ್ಲ. ಇನ್ನು ಪ್ರಾಣಿಗಳಿಗೆ ಕೊಡುವಷ್ಟು ಎಲ್ಲಿ ಸಿಕ್ಕುತ್ತದೆ?

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳಿದ್ದುದು ಈ ರಾಜ್ಯದ ವಿಷಯ ಅಲ್ಲ. ಡೆನ್ಮಾರ್ಕ್‌ನ ವಿಷಯ. ಡೆನ್ಮಾರ್ಕ್‌ನಿಂದ ಹಂದಿಗಳನ್ನು ನಮ್ಮ ದೇಶಕ್ಕೆ, ನಮ್ಮ ರಾಜ್ಯಕ್ಕೆ ಬೇಕಾದಷ್ಟು ಕಳುಹಿಸುತ್ತಾರೆ. ಅದರಿಂದ ಒಳ್ಳೆಯ ಸಂಪಾದನೆಯೂ ಇದೆ. ಸೊಸೈಟಿಯ ಹೆಸರಿನಲ್ಲಿ ಇಲ್ಲವೇ ಖಾಸಗೀ ಸಂಸ್ಥೆಯ ಹೆಸರಿನಲ್ಲಿ ಈ ಬಿವಿಎಸ್‌ಸಿ ಯನ್ನು, ಬಿಎಫ್‌ಸಿಯನ್ನು, ಡಿಗ್ರಿ ಕಾಲೇಜುಗಳನ್ನು ಮೆಡಿಕಲ್ ಕಾಲೇಜಿನ ಹಾಗೆ, ಇಂಜಿನೀಯರಿಂಗ್ ಕಾಲೇಜಿನ ಹಾಗೆ ಪ್ರಾರಂಭ ಮಾಡಬಾರದು. ಈ ಅಗ್ರಿಕಲ್ಚರಲ್ ಕಾಲೇಜು ಏನು ಇದೆ ಇದರಲ್ಲಿ ಬಡವರಿಕ್ಕಳಿಗೆ ಸೀಟು ಸಿಗುವ ಹಾಗೆ ಇರಬೇಕು. ನಾನು ಮಂತ್ರಿಯಾಗಿದ್ದಾಗ ಬಿಎಸ್‌ಸಿ (ಎಜಿ)ಗೆ ವಿದ್ಯಾರ್ಥಿಗಳನ್ನು ಸೆಲೆಕ್ಟ್ ಮಾಡುವ ವಿಚಾರದಲ್ಲಿ ಬಡ ವರಿಕ್ಕಳಿಗೆ, ಹಾಗೂ ಯಾರು ವ್ಯವಸಾಯದಲ್ಲಿ ಇರುತ್ತಾರೋ ಅಂಥ ರೈತನ ಮಗನಿಗೇ ನಿಜವಾಗಿಯೂ ಸೀಟು ಕೊಡಬೇಕು ಎಂದು ಹೇಳಿದೆ. ಹಳ್ಳಿಯಿಂದ ಬಂದಿರತಕ್ಕಂಥಾ ರೈತನ ಮಗನಿಗೆ ಆ ವಿಚಾರ ಗೊತ್ತಿರುತ್ತದೆ. ಪಟ್ಟಣದವರಿಗೇನು ಗೊತ್ತಿದೆ. ಪಟ್ಟಣದಿಂದ ಬಂದಂಥಾ ಒಬ್ಬ ಹುಡುಗನನ್ನು ಭತ್ತ ಎಲ್ಲಿ ಬೆಳೆಯುತ್ತಿದೆ ಎಂದು ಕೇಳಿದಾಗ ಅವನು ಏನು ಹೇಳಿದನು ಎಂದು ಮಾರದಲ್ಲಿ ಗೊಂಚಲಂ ಗೊಂಚಲಾಗಿ ಬಿಡುತ್ತದೆ ಎಂದೂ ಹೇಳಿದನು. ಇಂಥವರಿಗೆ ಇದರಲ್ಲಿ ಸೀಟು ಕೊಡುವುದಾದರೆ ಅವನು ನಾಳೆಯ ದಿವಸ ಶಾಲೇಜಿಗೆ ಬಂದರೆ ಆ ವಿದ್ಯಾರ್ಥಿಗಳಿಗೆ ಪಾಠ ಏನು ಹೇಳಿಯಾನು? ಆ ವಿದ್ಯಾರ್ಥಿಗಳು ಪಟ್ಟಣದಲ್ಲಿ

ಓದಿರುವುದರಿಂದ ಅವರಿಗೆ ನಿಜವಾಗಿಯೂ ಗ್ರಾಮೀಣ ಪ್ರವೇಶದ ಅರಿವು ಇರುವುದಿಲ್ಲ. ಆದುದರಿಂದ ನಾನು ಹೇಳುವುದು ನಿಜವಾಗಿಯೂ ಕೂಡ ಗ್ರಾಮೀಣ ಪ್ರದೇಶದಿಂದ ಬಂದಿರತಕ್ಕಂಥ ಹುಡುಗರಿಗೆ ಈ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಸೀಟು ಸಿಗಬೇಕು. ಖಾಸಗೀ ಸಂಸ್ಥೆಯವರು ಅಗ್ರಿಕಲ್ಚರಲ್ ಕಾಲೇಜನ್ನು ಮಾಡಿದರೆ ಖಂಡಿತ ಹಣವನ್ನು ಸಂಪಾದನೆ ಮಾಡುವುದಕ್ಕೆ ಹೊರಡುತ್ತಾರೆ. ನ್ಯಾಯವಾಗಿ ರೈತನ ಮಗನಿಗೆ ಸೀಟು ಕೊಡದೆ ಪಟ್ಟಣದಲ್ಲಿರುವವರಿಗೆ, ಹಣ ಕೊಡುವವರಿಗೆ ಸೀಟು ಕೊಡುವುದಾದರೆ ನಾನು ಮೊದಲೇ ಹೇಳಿದ ಹಾಗೆ ಭತ್ತ ಹೇಗೆ ಬೆಳೆಯುತ್ತದೆ ಎಂದು ಕೇಳಿದ್ದಕ್ಕೆ ಮಂರದಲ್ಲಿ ಗೊಂಚಲು ಗೊಂಚಲಾಗಿ ಬಿಡುತ್ತದೆ ಎಂದು ಹೇಳತಕ್ಕಂಥ ವಿದ್ಯಾರ್ಥಿಗೆ ಅವರು ಸೀಟು ಕೊಡುವುದಾದರೆ ಅವನು ನಾಳೆಯ ದಿವಸ ಅಗ್ರಿಕಲ್ಚರಲ್ ಕಾಲೇಜಿಗೆ ಲೆಕ್ಚರರ್ ಆಗಿ ಬಂದರೆ ಆ ವಿದ್ಯಾರ್ಥಿಗಳಿಗೂ ಸಹ ಇದೇ ರೀತಿಯಾಗಿ ಪಾಠ ಹೇಳಿಕೊಟ್ಟರೆ ನೀವು ಫುಡ್ ಪ್ರೊಡಕ್ಷನ್ಸ್ ಜಾಸ್ತಿ ಮಾಡಬೇಕು ಎಂದು ಹೇಳಿಕೊಳ್ಳುತ್ತೀರಲ್ಲಾ ಅದು ಹೇಗೆ ಆಗುತ್ತದೆ? ಇದು ನೆಲದಲ್ಲಿ ಬೆಳೆದರೆ ಲೇಟ್ ಆಗುತ್ತದೆ ಎಂದು ಮರದಲ್ಲಿ ಭತ್ತದ ತೆನೆಯು ಗೊಂಚಲಾಗಿ ಬಿಡುತ್ತದೆ ಎಂದು ಹೇಳುವವರಿಂದ ಏನು ಪ್ರಯೋಜನವಾಗುತ್ತದೆ? ಇವೊತ್ತಿನ ದಿವಸ ಕರ್ನಾಟಕದಲ್ಲಿ ಅಗ್ರಿಕಲ್ಚರಲ್ ಕಾಲೇಜು ಎಂದರೆ ಒಳ್ಳೆಯ ಸೆಸರು ಬಂದಿದೆ. ಧಾರವಾಡ-ಹುಬ್ಬಳ್ಳಿಯಲ್ಲೂ ಕೂಡ ಮತ್ತೊಂದು ಅಗ್ರಿಕಲ್ಚರಲ್ ಕಾಲೇಜು ಮಾಡಬೇಕೆಂದು ಕೇಳುತ್ತಿದ್ದಾರೆ.

ಅಧ್ಯಕ್ಷರು.—ಇವರು ಹೈಬ್ರಿಡ್ ಆಫೀಸರುಗಳು..... ...

ಶ್ರೀ ಎಸ್. ಬಂಗಾರಪ್ಪ.—ಈಗ ಇರುವಂಥ ಅಗ್ರಿಕಲ್ಚರಲ್ ಕಾಲೇಜುಗಳು ಸಾಲದು. ಅಗ್ರಿಕಲ್ಚರಲ್ ಕಾಲೇಜಿಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಳ್ಳೆಯ ಹೆಸರು ಬಂದಿದೆ. ಇಲ್ಲಿ ಪ್ರಪಂಚದ ಎಲ್ಲಾ ಸಂಸ್ಥೆಗಳವರೂ ಕೂಡ ಕೆಲಸ ಮಾಡುತ್ತಿದ್ದಾರೆ. ವೈಸ್‌ಛಾನ್ಸ್‌ಲರ್ ಕೂಡ ಹೊರಗಡೆ ದೇಶಕ್ಕೆ ಹೋಗಿ ಬಂದಂತಹ ಮಹಾಮೇಧಾವಿಗಳಾಗಿದ್ದಾರೆ. ಈ ಅಗ್ರಿಕಲ್ಚರಲ್ ಕಾಲೇಜುಗಳನ್ನು ಮತ್ತಷ್ಟು ಪ್ರಾರಂಭ ಮಾಡಬೇಕು ಆದರೆ ಇದನ್ನು ಸರ್ಕಾರ ಒಂದು ಹತೋಟಿಯಲ್ಲಿಟ್ಟುಕೊಳ್ಳಬೇಕು. ಮಾನ್ಯ ಪ್ರಕಾಶ್‌ರವರು ಇದನ್ನು ಸರ್ಕಾರದ ಹತೋಟಿಯಲ್ಲಿಟ್ಟುಕೊಳ್ಳಬೇಕೆನ್ನುವ ಉದ್ದೇಶದಿಂದ ಈ ವಂಸೂದೆಯನ್ನು ಏನು ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಪ್ರಕಾಶ್‌ರವರೇ, ನಮ್ಮ ಸ್ವಾಗತ ಪ್ರಗಸಟ್ಟಿ ಸಿಕ್ಕುವುದಿಲ್ಲ. ಇದರ ಬಗ್ಗೆ ಅವರು ಏನು ಒಂದು ಆರ್ಡಿನೆನ್ಸ್ ಹೊರಡಿಸುವರು ಅದಕ್ಕೆ ಆಗಲೇ ನಾನು ಸಂತೋಷ ಪಟ್ಟಿದ್ದೆ. ಯಾವ ಸಂಸ್ಥೆಯವರೇ ಆಗಲಿ, ಕಾಲೇಜನ್ನು ನಡೆಸಿದರೆ ಅವರು ಇಷ್ಟಬಂದಂತೆ ಹೋಗುವುದಕ್ಕೆ ಬಿಡಬಾರದು. ನಮ್ಮ ರಾಜ್ಯದ ಗಡಿದಾಟಿ ಬೇರೆ ವಿಶ್ವವಿದ್ಯಾನಿಲಯದಲ್ಲಿ ಅಫಿಲಿಯೇಷನ್ ತೆಗೆದುಕೊಂಡು ಬಂದರೆ ಅವರಿಗೆ ಅವಕಾಶ ಕೊಡಬಾರದು ಹಾಗೂ ಮಾನ್ಯತೆ ಮಾಡಬಾರದು. ನೀವು ಆ ಬಡವರ ಮನೆಗಳನ್ನು ಬುಲ್‌ಡೋಜರ್ ಅನ್ನು ತೆಗೆದುಕೊಂಡು ಹೋಗಿ ಉರುಳಿಸಿದ್ದೀರಿ. ದಾವಣಗೆರೆಯಲ್ಲಿ ಭಾಷ್ಯಂ ನಗರದಲ್ಲಿ ಮನೆಗಳನ್ನು ಏನು ಉರುಳಿಸಿದ್ದೀರೋ ಅದರ ಬಗ್ಗೆ ಚರ್ಚೆ ಈ ಸದನಕ್ಕೆ ಬರುತ್ತದೆ. ಬಂದಮೇಲೆ ಹೇಳುತ್ತೇನೆ. ಹಾಗೆಯೇ ಬೆಂಗಳೂರಿನಲ್ಲಿ ಯಾವಾವ ಮನೆಗಳನ್ನು ಉರುಳಿಸಿದ್ದೀರೋ ಮೈಸೂರಿನಲ್ಲಿ ಯಾವಾವ ಮನೆಗಳನ್ನು ಉರುಳಿಸಿದ್ದೀರೋ ಅದೂ ಸಹ ಚರ್ಚೆಗೆ ಬರುತ್ತದೆ ಎಲ್ಲಾ ಕಡೆಯೂ ಬುಲ್‌ಡೋಜರ್ ಅನ್ನು ತೆಗೆದುಕೊಂಡು ಮನೆಗಳನ್ನು ಉರುಳಿಸಲಿಕ್ಕೆ, ಧ್ವಂಸ ಮಾಡಲಿಕ್ಕೆ ಹೊರಟ್ಟಿದ್ದೀರಿ.

ಅಧ್ಯಕ್ಷರು.—ಆ ವಿಚಾರ ಬಂದಾಗ ಮಾತನಾಡಿ. ಈಗ ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆಂದು ಹೇಳಿದ ಮೇಲೆ ಆ ವಿಚಾರವೆಲ್ಲ ಈಗ ಏತಕ್ಕೆ ಬೇಕು?

ಶ್ರೀ ಎಸ್. ಬಂಗಾರಪ್ಪ.—ಮುಂದಿನ ವಾರ ಇದರ ವಿಚಾರ ಬರುತ್ತದೆ ಆವಾಗ ಮಾತನಾಡುತ್ತೇನೆ. ಸ್ವಾಗತ ಮಾಡಿದ ತಕ್ಷಣ ಈ ವಿಷಯವನ್ನೆಲ್ಲಾ ಹೇಳುವುದನ್ನು ಬಿಟ್ಟುಬಿಡಬೇಕೇನು? ಕೆಲವು ವಿಚಾರಗಳನ್ನು ನಾವು ಹೇಳಲೇ ಬೇಕಾಗುತ್ತದೆ ನಾನು ಆಗಲೇ ಡೇಳಿದ ಹಾಗೆ ಕನಕಪುರದ ಹತ್ತಿರ ಇರುವ ಕಟ್ಟಡವನ್ನು ಒಡೆಯಬೇಕು ಎಂದು ಹೇಳುತ್ತಿಲ್ಲ. ಆದರೆ ಬೇರೆ ಕಡೆಗಳಲ್ಲಿರತಕ್ಕಂಥ ಬಡವರ ಮನೆಗಳನ್ನು ಏನು ಉರುಳಿಸಿದ್ದೀರಿ ಅದನ್ನೆಲ್ಲಾ ಸಮಯ ಬಂದಾಗ ಹೇಳಲೇಬೇಕಾಗುತ್ತದೆ. ಈ ಮೆಡಿಕಲ್, ಇಂಜಿನೀಯರಿಂಗ್ ಕಾಲೇಜುಗಳು ಬೆಳೆಯುವುದನ್ನು ನೋಡಿದ ಮೇಲೆ ಬಹಳ ಯೋಚನೆ ಬಂದಿದೆ. ಈ ಕೃಷಿ ಕಾಲೇಜುಗಳೂ ಸಹ ಎಲ್ಲಿ ನಾಯಿ ಕೊಡೆಗಳಂತೆ ಹುಟ್ಟುತ್ತದೆಯೋ ಎಂದು. ಆದ್ದರಿಂದ ನಾವು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಇದನ್ನೆಲ್ಲಾ ನೋಡಬೇಕಾಗಿದೆ.

ಅಧ್ಯಕ್ಷರು.—ಎಲ್ಲವನ್ನೂ ಹೇಳಿದ್ದೀರಿ. ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆಂದು ಹೇಳಿಬಿಡಿ.

ಶ್ರೀ ಎಸ್. ಬಂಗಾರಪ್ಪ.—ಆ ಮಾತನ್ನು ನೀವೇ ಹೇಳಿಬಿಟ್ಟಿರಿ. ನಾನು ಈ ಮಸೂದೆಯನ್ನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಅಗ್ರಿಕಲ್ಚರಲ್ ಯೂನಿವರ್ಸಿಟಿ ಆಕ್ಟ್ ಪಾಸಾಗಿ ಅನೇಕ ವರ್ಷಗಳು ಗತಿಸಿದ್ದರೂ ಈ ಸದನ ಮತ್ತು ಮೇಲ್ಮನೆ ಎರಡೂ ಕೂಡ ಒಮ್ಮತದಿಂದ ಈ ಬಗ್ಗೆ ನಿರ್ಣಯ ಮಾಡಿ ಗೌರ್ನರ್‌ರವರ ಅಂಕಿತವು ಆಗಿದ್ದರೂ ಸಹ ಈ ಬಗ್ಗೆ ಕಾರ್ಯಕ್ರಮ ಏನು ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡು ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನು ಧಾರವಾಡದಲ್ಲಿ ಇನ್ನೂ ಪ್ರಾರಂಭ ಮಾಡಿಲ್ಲ. ಮುಹಾರಾಷ್ಟ್ರದವರು ಬರುತ್ತಾರೆ ನೀವೂ ಮಾಡುವುದಿಲ್ಲ, ನಮಗೂ ಬಿಡುವುದಿಲ್ಲ ಎಂದು ಹೇಳುತ್ತಾರೆ, ಹೀಗಾಗಬಾರದು. ನಿಮ್ಮ ಕರ್ತವ್ಯದ ದೃಷ್ಟಿಯಿಂದ ಧಾರವಾಡದಲ್ಲಿ ಒಂದು ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಬೇಕೆಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ವಿರೋಧಪಕ್ಷದ ನಾಯಕರು ಇದನ್ನು ಸ್ವಾಗತ ಮಾಡಿದಾಗ ಇದು ನಮ್ಮ ಸರ್ಕಾರ ದಕ್ಷತೆಯ ಪ್ರತೀಕ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಬೇರೆ ಮಸೂದೆಗಳನ್ನು ನಾವು ಖಂಡಿಸುತ್ತೇವೆ, ಕಾರಣ ನಿಮ್ಮ ಅಧ್ಯಕ್ಷತೆ ಅದರಲ್ಲಿ ಇದೆ ಎನ್ನುವ ವಿಚಾರವನ್ನು ತಾವು ಒಪ್ಪುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಹಾಗೇನೂ ಅಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಬೇರೆ ಬೇರೆ ಖಾಸಗೀ ಸಂಸ್ಥೆಗಳು ನಾಯಿಕೊಡೆಗಳಂತೆ ಏನು ಪ್ರಾರಂಭವಾಗಿದೆ ಆ ರೀತಿ ಇಲ್ಲಿ ಇದೂ ಆಗಬಾರದು. ಅದಕ್ಕೆ ಒಂದು ಮೂರ್ತಿ ಸ್ವರೂಪವನ್ನು ಕೊಟ್ಟು ಒಳ್ಳೆಯ ರೀತಿಯಲ್ಲಿ ನಡೆಯಬೇಕೆನ್ನುವುದೇ ಇದರ ಉದ್ದೇಶ. ಅದಕ್ಕಾಗಿ ಈ ಒಂದು ವಿಧೇಯಕವನ್ನು ತಂದಿದ್ದೇವೆ. ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲ್‌ರವರು ಇನ್ನೊಂದು ಯೂನಿವರ್ಸಿಟಿಯಾಗಬೇಕು ಎಂದು ಸದನದಲ್ಲಿ ಹೇಳಿದ್ದಾರೆ. ಹಿಂದೆಯೂ ಸಹ ಇದರ ಬಗ್ಗೆ ಅನೇಕ ಸಲ ಚರ್ಚೆನಡೆದಿದೆ. ಇದರ ಬಗ್ಗೆ ಸಂಪೂರ್ಣ ಸಹಾನುಭೂತಿ ಇದೆ. ಆದರೆ ಈ ಬಗ್ಗೆ ಪರ್ಯಾಲೋಚಿಸಿ ಸಂಪನ್ಮೂಲಗಳು ಒದಗಿಸಿದ ತಕ್ಷಣ ಇದು ಪ್ರಾರಂಭವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು —ಪ್ರಸಾವ ಏನೆಂದರೆ ಗ್ರಾಮೀಣ ಇಸವಿಯ ಕೃಷಿ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ಪರ್ಯಾಲೋಚಿಸುವುದು

ಖಂಡ ೨ ರಿಂದ ೪ ರವರೆಗೆ

ಅಧ್ಯಕ್ಷರು.— 'ಖಂಡ ೨ ರಿಂದ ೪ ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೪ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ :

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು

ಮೊದಲನೇಯ ಖಂಡ, ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸಂವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸರಿಸಲಾಯಿತು.

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿ).—೧೯೮೫ನೇ ಇಸವಿಯ ಕೃಷಿ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು. —ಪ್ರಸ್ತಾಪ ಏನೆಂದರೆ... ೧೯೮೫ನೇ ಇಸವಿಯ ಕೃಷಿ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ವಿತ್ತೀಯ ಕಾರ್ಯಕಲಾಪಗಳು (ಮುಂ. ಪ.)

ಅಭಿಯಾಚನೆ ಕ್ರಮಾಂಕ–೫೫ ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೫,೦೮,೬೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೩,೭೪,೪೬,೦೦೦ ರೂಪಾಯಿಗಳಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧಿಯಾಚನೆ ಕ್ರಮಾಂಕ–೫೬ ಕ್ರಮಪಡಿಸಿದ ಮಾರುಕಟ್ಟೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ, ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೮೧,೨೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು —ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಿ.ಎಸ್. ಆಚಾರ್. (ಬೈಂದೂರು).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಮಂತ್ರಿಗಳು ಮಂಡಿಸಿದಂಥ ಅಧಿಸೂಚನೆ ಕ್ರಮಾಂಕ ೫೫ ಮತ್ತು ೫೬, ಸಹಕಾರ ಮತ್ತು ಕ್ರಮಪಡಿಸಿದ ಮಾರುಕಟ್ಟೆಗಳು ಇವುಗಳ ಕುರಿತಾದ ಬೇಡಿಕೆಗಳನ್ನು ಇದಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳ ಅನುಷ್ಠಾನದಲ್ಲಿನ ಲೋಪದೋಷ, ಪ್ರಗತಿಯಲ್ಲಿನ ಅಸಮರ್ಪಕತೆ ಇವುಗಳಿಗಾಗಿ ನಾನು ಇದನ್ನು ವಿರೋಧ ಮಾಡುತ್ತಾ ಇದ್ದೇನೆ. ಕಳೆದ ೮೦ ವರ್ಷಗಳ ಇತಿಹಾಸ ಭಾರತ ದೇಶದ ಸಹಕಾರಿ ರಂಗಕ್ಕೆ ಇದೆ. ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ಸೋಪಾನವಾಗಿ ಸಹಕಾರಿ ರಂಗ ಬೆಳೆದು ಬಂದಿದೆ. ಕರ್ನಾಟಕದಲ್ಲಿ ಸಹಕಾರಿ ರಂಗ ಅನೇಕ ವರ್ಷಗಳಿಂದ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾ ಇದ್ದರೂ ಸಹ ಇನ್ನೂ ದೇಶದಮಟ್ಟದಲ್ಲಿ ಳನೇ ಸ್ಥಾನದಲ್ಲಿದೆ. ಅದಕ್ಕಿಂತ ಮೇಲೆ ಏರಬೇಕಾದ ಅವಶ್ಯಕತೆ ಇದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ರಾಜ್ಯದಲ್ಲಿ ಸುಮಾರು ೨೩,೧೨೦ ವ್ಯವಸ್ಥಿತ ರೀತಿಯ ಸಹಕಾರ ಸಂಘಗಳಿವೆ. ಒಂದು ಕೋಟಿ ಜನರ ಸದಸ್ಯತ್ವ ಇದೆ. ಗ್ರಾಮೀಣ ಮಟ್ಟದಲ್ಲಿ ಶೇಕಡ ೯೨ರಷ್ಟು ಗ್ರಾಮೀಣ ಕುಟುಂಬಗಳು ಸದಸ್ಯತ್ವ ಹೊಂದಿವೆ ಎಂದು ಹೇಳುತ್ತಿದ್ದೀರಿ. ಇನ್ನೂ ಹೆಚ್ಚಿನ ಸದಸ್ಯತ್ವ ಮಾಡುವಂಥ ಅವಕಾಶವಿದೆ. ೨೨೦೦ ಕೋಟಿ ರೂಪಾಯಿಗಳಿಗೂ ಮಿಕ್ಕಿ ಹಣ ಚಲಾವಣೆ ಬಂಡವಾಳ ಇರುವ ಸಹಕಾರಿರಂಗ ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಕೃಷಿಕರಿಗೆ ನೆರವು, ಮಾರುಕಟ್ಟೆ ವ್ಯವಸ್ಥೆ ಪೂರೈಕೆ, ಬಳಕೆ ಸಾಮಗ್ರಿ ವಿತರಣೆ, ಉತ್ಪಾದನಾ ಘಟಕಗಳು ಹೀಗೆ ಅನೇಕ ವಿಧವಾದ, ಬಹು ವಿಧವಾದ ಕೆಲಸಗಳನ್ನು ಮಾಡುತ್ತಿದೆ. ಇದರ ಕೆಲಸದಿಂದ ನಮ್ಮ ರಾಜ್ಯವನ್ನು ಹೊಸನಾಡು, ರಸದ